ಇದರಿಂದ ಇನ್ನಷ್ಟು ಉತ್ತೇಜನ ಬರ್ತದೆ ಎಂದು ಆ ಅಭಿಮಾನಿ ಹೇಳಿದ್ದು ಕಿವಿಯಲ್ಲೇ ಮತ್ತೆ ಮತ್ತೆ ಗುನುಗಿತು. ಅಲ್ಲೇ ಮುಸುಕು ಬೆಳಕಲ್ಲಿ ಬಿಸ್ಲೆರಿ ಬಾಟಲಿ ಓಪನ್ ಮಾಡಿದ ಹಾಗೆ, ಇದನ್ನೂ ತೆರೆದು, ಒಂದೆರಡು ತೊಟ್ಟು ಗಟಗಟ ಕುಡಿದ. ಇದೆಂತ ರುಚಿಯಪ್ಪಾ? ಯಾರಾದ್ರೂ ಇದನ್ನೆಲ್ಲಾ ಕುಡಿತಾರಾ.. ಅಂತ ಒಂದು ಕ್ಷಣ ಅನ್ನಿಸಿದರೂ ಹೊಟ್ಟೆಯೊಳಗೆಲ್ಲೋ ತಣ್ಣಗೇ, ಬೆಚ್ಚಗೇ, ಇದುವರೆಗೂ ಆಗದ ಹಿತವಾದ ಉನ್ಮಾದವೊಂದು ಹೂವಿನಂತೆ ಬಿರಿದಾಗ ಅವನಿಗೆ ವಿನೂತನ ಅನುಭವವಾಯಿತು. 'ಹೋ.. ರುಚಿಯಲ್ಲಾ. ಈ ಉನ್ಮಾದಕ್ಕೆ ಕುಡಿತಾರೇನೋ' ಅಂದುಕೊಂಡವನಿಗೆ ಕುಡಿದು ಒಂಥರಾ ಖುಷಿಯೇ ಆಯಿತು. ಮತ್ತೆ ಐದಾರು ಗುಟುಕು ಹೀರಿದ. ರಂಗಕ್ಕೆ ಹೋಗಿ ಎಂದಿನಂತೆ ಬಾಯ್ತುಂಬಾ ಹಾಡಿದ. ಇಂದು ತನ್ನ ಧ್ವನಿಯಲ್ಲಿ ಹೊಸ ಕಂಪನವೊಂದು ಮೊಳೆತ ಹಾಗೆ ಅನ್ನಿಸಿತು. ನಿಮ್ಮ ರಾಗಕ್ಕೆ ಇದರಿಂದ ಇನ್ನಷ್ಟು ಉತ್ತೇಜನ ಬರ್ತದೆ ಎಂದು ಅಭಿಮಾನಿ ಹೇಳಿದ್ದಕ್ಕೋ, ಏನೋ ಒಂಥರಾ ನೆಮ್ಮದಿ ಅನ್ನಿಸಿತು ಅವನಿಗೆ. ಚೂರು ಚೂರು ತಲೆ ಸುತ್ತಿದ ಹಾಗನ್ನಿಸಿದರೂ ಅವನ ಗಟ್ಟಿ ಜೀವ ಅವೆಲ್ಲವನ್ನೂ ಸಹಿಸಿಕೊಂಡಿತು. ಅಭಿಮಾನಿಗಳಿಂದ ಹೀಗೆಲ್ಲಾ ಕಾಣಿಕೆಯೂ ಬರ್ತದೆ ಅಂತ ಗೊತ್ತಾದ ಮೇಲಂತೂ ಅವನು ಅಭಿಮಾನಿಗಳನ್ನು ಹತ್ತಿರವಿಟ್ಟುಕೊಳ್ಳುವುದು, ಅವರಿಗೆ ಬೇಕಾದ ಹಾಗಿರುವುದನ್ನು ಚಾಚೂ ತಪ್ಪದೇ ರೂಢಿಸಿಕೊಂಡ. ಇನ್ನೊಮ್ಮೆ ಆವತ್ತು ಬಾಟಲಿ ಕೊಟ್ಟ ಅಭಿಮಾನಿ ಸಿಕ್ಕಾಗ, 'ನೀವು ಆವತ್ತು ಕೊಟ್ಟಿದ್ದು ಭಾರೀ ಲಾಯಕ್ಕಿತ್ತು. ನಿಮ್ಮ ಪ್ರೀತಿ ಆಶೀರ್ವಾದ ಹೀಗೇ ಇರ್ಲಿ' ಅಂದ. ಅಭಿಯಾನಿ ಅರ್ಥ ಮಾಡಿಕೊಂಡವನಂತೆ ತನ್ನ ಚೀಲದಿಂದ ಹೊಳೆಯುತ್ತಿದ್ದ ಬಾಟಲಿ ತೆಗೆದು, 'ಇದು ಮಾತ್ರ ಗೋವಾದ್ದು, ನಿಮಗೆ ಒಳ್ಳೆ ಹಿಡಿಸ್ತದೆ ನೋಡಿ' ಎಂದು ನಕ್ಕ. ಕ್ರಮೇಣ ಆ ಅಭಿಮಾನಿ ಗಿರಿಧರನ ಪ್ರಾಣಸಖನಾದ. ಬಾಟಲಿ ಸ್ನೇಹಿತನಾದ.

ಗಿರಿಧರನಿಗೆ ಪದ್ಯ ಒಳ್ಳೆದಾಗಿದೆ ಎಂದು ಕವರೊಳಗೆ ಐನೂರದ್ದೋ, ಒಂದು ಸಾವಿರದ್ದೋ ನೋಟು ಹಾಕಿ ಪ್ರೀತಿಯಿಂದ ಕೊಡುವ ದೊಡ್ಡ ಮನುಷ್ಯರೂ ಇದ್ದರು. ನಿಮಗೆ ಪ್ರೀತಿಯಿಂದ ತಂದದ್ದು ಎಂದು ತನ್ನ ಮನೆಯಲ್ಲಾದ ಸೀತಾಫಲ, ಪಪ್ಪಾಯಿ, ಮಾವು, ಬಾಳೆಹಣ್ಣುಗಳನ್ನು ಕೊಡುವ ಕುಚೇಲನಂತಹ ಅಭಿಮಾನಿಗಳೂ ಇದ್ದರು. ಆದರೆ ಇವುಗಳಲ್ಲಿ ಮೊದಲನೆಯವರೇ ಗಿರಿಧರನಿಗೆ ಪ್ರಿಯರಾದರು. ಅದರಿಂದ ಅವನ ಪಾನಗೋಷ್ಠಿಗೆ ಸಾಕಷ್ಟು ಆರ್ಥಿಕ ಸಂಪತ್ತು ಕ್ರೋಡೀಕರಣವಾಗುತ್ತಿತ್ತು.

ಹಾಗೆ ಅವರು ಕೊಟ್ಟದ್ದನ್ನೆಲ್ಲಾ ನಿರ್ದಾಕ್ಷಿಣ್ಯವಾಗಿ ತಗೊಂಡು ತಾನು ಉಳಿದುಕೊಂಡಿದ್ದ ಮನೆಯಲ್ಲಿ, ಹೋದ ಊರೂರುಗಳಲ್ಲಿ ಪಾನಗೋಷ್ಠಿ ಮಾಡುವಷ್ಟು, ತಿರುಗಾಟ ಮಾಡುವ ಊರುಗಳಲ್ಲಿ ಕೂತು ಕುಡಿಯುವ ಒಳ್ಳೆಯ ಜಾಗವೆಲ್ಲಿದೆ ಎಂದು ಹುಡುಕಿಕೊಂಡು ಹೋಗುವಷ್ಟು, 'ಸ್ವಲ್ಪ ನೀನೂ ಹಾಕ್ತೀಯಾ' ಎಂದು ಆಗಷ್ಟೇ ಯಕ್ಷಗಾನ ವೇಷಕ್ಕೆ ಬಂದ ಹುಡುಗರನ್ನು ಸಲುಗೆಯಿಂದ ಸನ್ನೆ ಮಾಡಿ ಕೇಳುವಷ್ಟು ಪಾನ ಪ್ರಿಯನಾಗುತ್ತ ಹೋದ ಗಿರಿಧರ. ಕುಡಿಯುವುದು ಸರಾಗವಾಗಿ ನೀರು ಕುಡಿಯುವಷ್ಟು ಸುಲಲಿತವಾಯಿತು. ಆಟ ಶುರುವಾಗುವ ಮೊದಲು, ಮುಗಿದ ಮೇಲೆ ಸ್ವಲ್ಪಸ್ವಲ್ಪವೇ ಏರಿಸಿದರೆ ಮೈ ತುಂಬಾ ಅದ್ಯಾವುದೋ ನಯವಾದ ಮಾದಕತೆ ಆವರಿಸಿ ಪ್ರಸನ್ನನಾಗುತ್ತಿದ್ದ. ಆಗ ಪದ್ಯ, ಮಳೆಗೆ ಸರಿಯಾಗಿ ಶ್ರುತಿ ಸೇರಿಸಿ ಗುಡುಗುವ ಗುಡುಗಿನಂತೆ, ಜಿಗ್ ಜಿಗ್ ಎನ್ನುವ ಮಿಂಚಿನಂತೆ ತನ್ನೊಳಗಿನಿಂದ ಹೊರಡುತ್ತದೆ ಅಂತೆಲ್ಲಾ ಅನ್ನಿಸತೊಡಗುತ್ತಿತ್ತು ಗಿರಿಧರನಿಗೆ. ಅದಕ್ಕಿಂತಲೂ ಒಂದು ಹಂತ ಮುಂದುವರೆದು ಸ್ಟೀಲು ಬಾಟಲಿಯಲ್ಲಿ ಯಾರಿಗೂ ಕಾಣಿಸುವುದಿಲ್ಲವೆನ್ನುವ ಛಾತಿಯಿಂದ ಬಿಯರೋ, ವಿಸ್ಕಿಯೋ, ತುಂಬಿಸಿ, ರಂಗಸ್ಥಳಕ್ಕೆ ತಂದು ಅದು ನೀರಿನ ಬಾಟಲಿಯೇ ಎಂದು ಸಭಿಕರಿಗೆಲ್ಲಾ ಅನ್ನಿಸುವಂತೆ ವ್ಯವಸ್ಥಿತವಾಗಿಡುತ್ತಿದ್ದ. ಆದರೆ ಕುಡಿಯುವವರ ವಾಸನೆ ಒಬ್ಬರಿಗಾದ್ರೂ ಹತ್ತದೇ ಇರುತ್ತದೆಯೇ? ಚೆಂಡೆ ವಾದಕ ನಾರಾಯಣ ಮಕ್ಕಿ, ಚೌಕಿಯ ಕತ್ತಲೆಯಲ್ಲಿ ಗುಟ್ಟು ಗುಟ್ಟಾಗಿ ಗಿರಿಧರ ಒಮ್ಮೆ ಗುಟುಕುವುದನ್ನು ಕಣ್ಣಾರೆ ನೋಡಿದ್ದ. ಯಲ್ಲಾಪುರಕ್ಕೆ ತಿರುಗಾಟಕ್ಕೆ ಹೋದಾಗ ಅಲ್ಲಿದ್ದ ಒಂದು ಪುಟ್ಟ ಬಾರ್‌ಗೆ ಗಿರಿಧರ ನುಗ್ಗಿದ್ದನ್ನು ನೋಡಿದ್ದ ಆ ಊರಿನ ನಾರಾಯಣನ ಸ್ನೇಹಿತನ್ನೊಬ್ಬ, 'ಎಂತ ನಿಮ್ಮ ಭಾಗವತರು ಸ್ವಲ್ಪ ಡಿಂಗಾದ ಹಾಗಿದೆ. ಯಾವ ಊರಿಗೆ ಬಂದ್ರೂ ಬಾರು ಹುಡುಕಿಕೊಂಡು ಹೋಗ್ತೀರಲ್ಲಾ,

